# ಎಲ್ಲೆಡೆ ಹಸಿರು

## ‘ಪರಿಸರ ರಕ್ಷಣೆ ಎಲ್ಲರ ಜವಾಬ್ದಾರಿ’

**ವಿಕ ಸುದ್ದಿಲೋಕ** ಸಂಡೂರು

ಪರಿಸರದಲ್ಲಿನ ಗಾಳಿ, ನೀರು, ಮಣ್ಣು, ಗಿಡ, ಮರಗಳು, ಕಾಡು, ಸಮುದ್ರವನ್ನು ಉತ್ತಮವಾಗಿ ಉಳಿಸಿಕೊಂಡು ಹೋಗುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಮಿನೇರಾ ಕಾರ್ಖಾನೆ ನಿರ್ದೇಶಕ ಟಿ.ಹನುಮಂತರೆಡ್ಡಿ ಹೇಳಿದರು.

ತಾಲೂಕಿನ ತೋರಣಗಲ್ಲು ಹೋಬಳಿಯ ಸುಲ್ತಾನ್‌ಪುರ ಸಮೀಪದ ಮಿನೇರಾ ಕಾರ್ಖಾನೆ ಆವರಣದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದರು. ಇಡೀ ಜೀವ ಸಂಕುಲ ಗಾಳಿ, ಆಹಾರ, ನೀರಿನ ಮೇಲೆ ಸಂಪೂರ್ಣ ಅವಲಂಬಿತವಾಗಿದ್ದು, ಉತ್ತಮ ಪರಿಸರವಿಲ್ಲದೆ ಜೀವಿಗಳು ಭೂಮಿಯ ಮೇಲೆ ಬದುಕಿ ಉಳಿಯುವುದು ಅಸಾಧ್ಯ. ಕಾರ್ಖಾನೆ ಆವರಣದಲ್ಲಿ ಇಂದು 500 ಸಸಿ ನೆಡಲಾಯಿತು ಎಂದರು.ಕಂಪೆನಿಯ ಪರಿಸರ ಅಧಿಕಾರಿ ಮುರುಳೀಧರ, ಸುರಕ್ಷತೆ ಅಧಿಕಾರಿ ಬಿ.ವಿ.ರೆಡ್ಡಿ, ಆಡಳಿತ ವಿಭಾಗದ ಅಧಿಕಾರಿ ನಜೀರ್ ಅಹ್ಮದ್, ಭದ್ರತಾ ಅಧಿಕಾರಿ ಮಾರ್ಗಬಂಧು, ಹಿರಿಯ ಅಧಿಕಾರಿಗಳಾದ ವೇಣುಗೋಪಾಲ್, ಲಕ್ಷ್ಮಿರಾಜಂ, ಸಗೀರ್ ಅಹ್ಮದ್, ಚಂದ್ರಶೇಖರ ಪಾಟೀಲ್, ಕಿರಣ್ ಕುಮಾರ್‌ರೆಡ್ಡಿ, ಇತರರು ಇದ್ದರು.



ಸಂಡೂರಿನ ತೋರಣಗಲ್ಲು ಹೋಬಳಿ ಸುಲ್ತಾನ್‌ಪುರ ಬಳಿಯ ಮಿನೇರಾ ಕಾರ್ಖಾನೆ ಆವರಣದಲ್ಲಿ ವಿಶ್ವ ಪರಿಸರ ದಿನದ ನಿಮಿತ್ತ ಸಸಿ ನೆಡಲಾಯಿತು.

## Greenery Everywhere

**'Environmental protection is everyone's responsibility'**

Mr. T. Hanumanthareddy, Director of Minera Steel & Power Private Limited, said that it is the responsibility of all of us to preserve the air, water, soil, plants, trees, forests, and sea in the environment.

He was speaking at a sapling planting program organized as part of World Environment Day on Sunday at the Minera factory premises near Sultanpur in Toranagallu hobli of the Sandur taluk. The entire living organism is completely dependent on air, food and water, and without a good environment, it is impossible for living beings to survive on earth. He said that 500 saplings were planted in the factory premises today. The company's Environment Officer Muralidhar, Safety Officer B.V. Reddy, Administrative Officer Nazir Ahmed, Security Officer Margabandhu, Senior Officers Venugopal, Lakshmirajam, Sagir Ahmed, Chandrashekhar Patil, Kiran Kumar Reddy, and others were present.

A sapling was planted on the occasion of World Environment Day at the Minera factory premises near Sultanpur, Toranagallu hobli, Sandur.